ಶ್ರೀ ಬುಗಾರಪ್ಪ.—ಅಧ್ಯಕ್ಷರೇ, ಇದರಲ್ಲಿ ಎರಡು ಪ್ರಶ್ನೆ ಇದೆ. ಮೊದಲನೆಯದು ಕೆಪಾಸಿಟಿಯನ್ನು 15 ಜನರಿಗೆ ಹೆಚ್ಚಿಸಿ ಅನುಕೂಲ ಮಾಡಿಕೊಡಬೇಕು ಎಂಬುದು, ಏಕೆಂದರೆ ಕಂಪನಿಯವರು ವೆಹಿಕಲ್ ತಯಾರು ಮಾಡುವುದಕ್ಕೆ ಲೈಸೆನ್ಸ್ ಪಡೆಯುವಾಗಲೇ 15–16 ಜನರಿಗೆ ಉಪಯೋಗವಾಗುವಂತೆ ಮಾಡಲು ಪಡೆದಿದ್ದಾರೆ. ವೆಹಿಕಲ್ ಕೆಪಾಸಿಟಿ 15 ಜನರಿಗಿದೆ. ಹೀಗಿರುವಾಗ 6 ಜನರಿಗೆ ರಿಸ್ಟ್ರಿಕ್ಟ್ ಮಾಡಿದರೆ ಯಾರೂ ವೆಹಿಕಲ್ ನಡೆಸುವುದಕ್ಕಾಗುವುದಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ತೀರ್ಮಾನಕ್ಕೆ ಬರುವುದು ಒಳ್ಳೆಯದು. 6+1 ಸೀಟಿಗೆ 250 ರೂಪಾಯಿ ತೆರಿಗೆ ಇದ್ದುದನ್ನು 1200 ರೂಪಾಯಿಗೆ ಹೆಚ್ಚು ಮಾಡಿದ್ದಾರೆ, ಇದು ಜಾಸ್ತಿ ಎಂಬುದು ವ್ಯಾನ್ ಮಾಲೀಕರ ಸಂಘದ ವಾದ ಸೀಟುಗಳ ಸಂಖ್ಯೆಹೆಚ್ಚು ಮಾಡಬೇಕು ಮತ್ತು ತೆರಿಗೆ ಕಡಿಮೆ ಮಾಡಬೇಕು ಎಂಬ ಎರಡು ಮುಖ್ಯ ಬೇಡಿಕೆಗಳನ್ನು ಅವರಿಟ್ಟಿದ್ದಾರೆ. ಕೆಎಸ್ಆರ್‌ಟಿಸಿ ಗೆ ನಷ್ಟವಾಗುವಂತೆ ಮಾಡಿ ಎಂದು ನಾನು ಹೇಳುತ್ತಿಲ್ಲ. ನಿಮ್ಮ ಸಂಸ್ಥೆಗೂ ನಷ್ಟವಾಗಬಾರದು, ಅವರೂ ಬದುಕಬೇಕು, ಪಬ್ಲಿಕ್‌ಗೂ ಉಪಯೋಗವಾಗಬೇಕು, ಆ ರೀತಿ ತೀರ್ಮಾನ ಮಾಡಿ. ಇಲ್ಲಿ ಕೆಲವು ಫೋಟೋಗಳಿವೆ. ಬಸ್ಸಿನ ಮೇಲೆ ಜನ ಕುಳಿತುಕೊಂಡು ಹೋಗುತ್ತಿರುವ ಫೋಟೋ ಇಲ್ಲಿದೆ. ಈ ತರಹ ಇರುವಾಗ ಜನರಿಗೆ ನಾವು ಸಹಾಯ ಮಾಡುತ್ತಿದ್ದೇವೆ ಎಂದು ಈ ಸಂಘದವರು ಹೇಳುತ್ತಿದ್ದಾರೆ.

ಅಧ್ಯಕ್ಷರು.—ಭಾಷಣ ಬೇಡ. ಕ್ಲಾರಿಫಿಕೇಷನ್ ಕೇಳಿ. ತಾವು ವಿರೋಧಪಕ್ಷದ ನಾಯಕರು ಎಂದು ಮಾತನಾಡಲು ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಆಗಲಿ. ಇನ್ನೊಂದು ವಿಚಾರ ಏನಂದರೆ, ಈ ವ್ಯಾನ್ ಮಾಲೀಕರಿಗೆ 10 ಸಾವಿರದಿಂದ 20 ಸಾವಿರದವರೆಗೆ ದಂಡ ಹಾಕಿದ್ದಾರೆ. ಎಂದು ಹೇಳುತ್ತಿದ್ದಾರೆ, ಇನ್ನೊಂದು ದಂಡ ಹಾಕಿದರೆ ಅವರು ವೆಹಿಕಲ್ ಮಾರಿಕೊಂಡು ಹೋಗುಬೇಕಾಗುತ್ತದೆ. ಆಗ ಕೆ.ಎಸ್.ಎಫ್.ಸಿಗೆ ಸಾಲವನ್ನೂ ವಾಪಸ್ ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಆ ರೀತಿ ದಂಡ ಹಾಕಿದ್ದರೆ ಅದನ್ನು ವಸೂಲು ಮಾಡದಂತೆ ಅಧಿಕಾರಿಗಳಿಗೆ ತಿಳಿಸಿ.

(ಉತ್ತರ ಇಲ್ಲ)

ಅಧ್ಯಕ್ಷರು.—ಭೂಪತಿಯವರೇ, ತಮ್ಮ ಗಮನ ಸೆಳೆಯುವ ಸೂಚನೆಗೆ ಸವಿಸ್ತಾರವಾಗಿ ಉತ್ತರ ಕೊಡಬೇಕೆಂಬ ಉದ್ದೇಶದಿಂದ ಗೃಹಮಂತ್ರಿಗಳು ಕಾಲಾವಕಾಶ ಕೇಳಿದ್ದಾರೆ. ಅದು ಬಂದನಂತರ ಆ ವಿಚಾರ ತೆಗೆದುಕೊಳ್ಳುತ್ತೇನೆ.

ಶ್ರೀ ಯು. ಭೂಪತಿ.—ಇದು ಬಹಳ ಮಹತ್ವವಾದ ವಿಚಾರ.

ಅಧ್ಯಕ್ಷರು.—ಅದಕ್ಕೋಸರವೇ ವಿವರ ತರಿಸುತ್ತಿದ್ದಾರೆ, ನಿಮಗೆ ಅರ್ಧ ಉತ್ತರ ಬೇಕೋ ? ಅಥವಾ ಸವಿಸ್ತಾರವಾದ ಉತ್ತರ ಬೇಕೋ 3

ಶ್ರೀ ಎಂ. ಎಸ್. ಕೃಷ್ಣನ್.—ಇದು ಪೋಲೀಸ್ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆ.

ಶ್ರೀ ಯು. ಭೂಪತಿ.—ಮನುಷ್ಯ ಸತ್ತುಹೋಗಿದ್ದಾನೆ.

ಅಧ್ಯಕ್ಷರು.—ಗೃಹ ಮಂತ್ರಿಗಳು ಪತ್ರ ಬರೆದಿದ್ದಾರೆ, ಸವಿಸ್ತಾರವಾದ ವರದಿ ಸರಿಸಬೇಕಾಗಿರುವುದರಿಂದ ಕಾಲಾವಕಾಶ ಬೇಕು ಎಂದು ಹೇಳಿದ್ದಾರೆ. ಅದು ಬಂದನಂತರ ಸೋಮವಾರ ಅಥವಾ ಮಂಗಳವಾರ ತಮಗೆ ಅವಕಾಶ ಮಾಡಿಕೊಡುತ್ತೇನೆ.

ಗೈರುಹಾಜರಾಗಲು ಅನುಮತಿ

ಅಧ್ಯಕ್ಷರು.—ವಿಧಾನಸಭಾ ಸದಸ್ಯರಾದ ಕಲ್ಯಾಣರಾವ್ ಮೊಳಕೆರೆಯವರು ದಿನಾಂಕ 25ನೇ ಜುಲೈ 1985ರಿಂದ 10ನೇ ಆಗಸ್ಟ್ 1985ರವರೆಗೆ ವಿಧಾನಸಭೆಯ ಉಪವೇಶನಗಳಿಗೆ ಗೈರುಹಾಜರಾಗಲು ಅನುಮತಿ ಕೋರಿ ಪತ್ರ ಬರೆದಿದ್ದಾರೆ. ಅವರಿಗೆ ಗೈರುಹಾಜರಾಗಲು ಸದನ ಒಪ್ಪಿಗೆ ನೀಡುತ್ತದೆಯೆ ?

(ಸಭೆ ಒಪ್ಪಿಗೆ ನೀಡಿತು)

ಅಧ್ಯಕ್ಷರು.—ಶ್ರೀ ಕಲ್ಯಾಣರಾವ್ ಮೊಳಕೆರೆಯವರಿಗೆ ಗೈರುಹಾಜರಾಗಲು ಅನುಮತಿ ನೀಡಲಾಗಿದೆ.

ನಿಯಮ 334 ರ ಮೇರೆಗೆ

ವಿಷಯ.—ವಾಣಿವಿಲಾಸ ಸಕ್ಕರೆ ಕಾರ್ಖಾನೆ ಅದನ್ನು ಲೇ ಆಫ್ ಘೋಷಿಸಿರುವುದರಿಂದ ನೌಕರರು ಬೀದಿ ಪಾಲಾಗಿರುವುದು :

ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ಅಧ್ಯಕ್ಷರೆ ಹಿರಿಯೂರು ತಾಲ್ಲೂಕಿನಲ್ಲಿರುವ ವಾಣಿವಿಲಾಸ ಸಹಕಾರ ಸಕ್ಕರೆ ಖಾರ್ಖಾನೆ ಲೇ-ಆಫ್ ಘೋಷಿಸಿದ್ದು ಇದರಿಂದ ಸದರಿ ಕಾರ್ಖಾನೆಯ ನೌಕರರು ಬೀದಿಪಾಲಾಗಿದ್ದಾರೆ. ಲೇ—ಆಫ್ ಘೋಷಿಸಿದ ಕಾರ್ಖಾನೆಯ ಆಡಳಿತ ಮಂಡಳಿಯು ನೌಕರರಿಗೆ ಅರ್ಧ ಸಂಬಳವನ್ನು ಕೊಟ್ಟು ನಂತರ ಲೇ ಆಫ್ ಘೋಷಿಸಬೇಕಾಗಿತ್ತು. ಅದನ್ನು ಅವರು ಕೊಡದೇ ಇರುವ ಕಾರಣದಿಂದ ನೌಕರರು ಸರದಿ ಉಪವಾಸ ಮುಷ್ಕರ ಮಾಡುತ್ತಿದ್ದಾರೆ. ಇದು ಸರ್ಕಾರದ ಗಮನಕ್ಕೂ ಬಂದಿದೆ. ನೌಕರರ ಹಿತದೃಷ್ಟಿಯಿಂದ ಸರ್ಕಾರ ಅವರಿಗೆ ಅರ್ಧ ಸಂಬಳವನ್ನು ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತದೆಂದು ಭಾವಿಸಿದ್ದೇನೆ. ದುರಾಡಳಿತದ ಆಗರವಾದ ಈ ಕಾರ್ಖಾನೆಯ ಆಡಳಿತ ಮಂಡಳಿಯು ವಿಶೇಷ ಕಾರ್ಯ ನಿರ್ವಹಿಸಲು ನಿಯೋಜಿಸಿಕೊಂಡಿರುವ ನೌಕರರೆಲ್ಲಾ ಮಂಡಳಿಯವರ ಸಂಬಂಧಿಗಳಾಗಿರುವುದಲ್ಲದೆ ಸ್ಥಿತಿವಂತರಾಗಿದ್ದಾರೆ. ಅಮಾಯಕರು ಬೀದಿ ಪಾಲಾಗಿದ್ದಾರೆ. ಈ ಬಡ ನೌಕರರಿಗೆ ಅರ್ಧ ಸಂಬಳ ಕೊಡಿಸುವ ವ್ಯವಸ್ಥೆ ಮಾಡಬೇಕು. ಜೊತೆಗೆ ಷೇರುಬಂಡವಾಳ ಕರಗಿ ಕಾರ್ಖಾನೆ ದಿವಾಳಿಯಾಗುವ ಪರಿಸ್ಥಿತಿ ಬಂದಿದೆ. ಈ ವಿಚಾರ ಜನರಲ್ ಬಾಡಿ ಮೀಟಿಂಗಿನಲ್ಲೂ ಪ್ರಸ್ತಾಪವಾಗಿದೆ. ಆದ್ದರಿಂದ ಕೂಡಲೇ ಆಡಳಿತ ಮಂಡಳಿಯನ್ನು ರದ್ದುಮಾಡಿ ಕಾರ್ಖಾನೆಯನ್ನು ಸರ್ಕಾರದ ಮಟ್ಟಕ್ಕೆ ತೆಗೆದುಕೊಂಡು ರೈತರನ್ನು ಕಾಪಾಡಬೇಕೆಂದು ನನ್ನ ಮನವಿ.

ಶ್ರೀ ಎ. ಲಕ್ಷ್ಮೀಸಾಗರ್.—ಈ ವಿಚಾರವನ್ನು ಸಹಕಾರ ಮಂತ್ರಿಗಳಿಗೆ ತಿಳಿಸಿ ಮಾನ್ಯ ಸದಸ್ಯರಿಗೆ ಕಳುಹಿಸುವಂತೆ ಹೇಳುತ್ತೇನೆ.

(ii) ರಾಜ್ಯದ ತಾಂತ್ರಿಕ ವಿದ್ಯಾ ಸಂಸ್ಥೆಗಳಲ್ಲಿ ಹೊರನಾಡು ಕನ್ನಡಿಗರಿಗೆ ಆದ್ಯತೆ ನೀಡುವ ಬಗ್ಗೆ

ಶ್ರೀ ಕೆ. ಎಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ತಾಂತ್ರಿಕ ವಿದ್ಯಾಸಂಸ್ಥೆಗಳಿಗೆ ವಿದ್ಯಾರ್ಥಿಗಳ ಸೇರ್ಪಡೆಯ ವಿಚಾರದಲ್ಲಿ 1984-85ರಲ್ಲಿ ಕರ್ನಾಟಕ ಸರಕಾರವು ಹೊರನಾಡು ಕನ್ನಡಿಗರಿಗಾಗಿ ಕೆಲವೊಂದು ಸಂಖ್ಯೆಯ ಸೀಟುಗಳನ್ನು ಮೀಸಲಿಟ್ಟು ಆಜ್ಞೆ ಹೊರಡಿಸಿತ್ತು. 1985-86ನೇ ಇಸವಿಗೆ ಸಂಬಂಧಪಟ್ಟಂತೆ ಸದರಿ ನೀತಿಯನ್ನು ಮಾರ್ಪಡಿಸಿ ತಾಂತ್ರಿಕ ವಿದ್ಯಾಸಂಸ್ಥೆಗೆ ಸೇರಲು ಬಯಸುವ ಹೊರನಾಡು ಕನ್ನಡಿಗ ವಿದ್ಯಾರ್ಥಿಯು ಎಸ್.ಎಸ್.ಎಲ್.ಸಿ. ಅಥವಾ ಹತ್ತನೆಯ ತರಗತಿಯವರೆಗೆ ಒಂದು ಭಾಷಿಕ ವಿಷಯವಾಗಿ ಕನ್ನಡವನ್ನು ಅಭ್ಯಾಸ ಮಾಡಿರಕ್ಕದ್ದು ಎಂಬ ನಿಯಮವನ್ನು ಹೊಸದಾಗಿ ಸೇರಿಸಲಾಗಿದೆ. ಈ ನಿಯಮದಿಂದಾಗಿ ಕಾರಣಾಂತರದಿಂದ ಹೊರನಾಡಿನಲ್ಲಿ ವಾಸಿಸುತ್ತಿದ್ದು ಅಲ್ಲಿ ಕನ್ನಡ ಕಲಿಯಲು ಅವಕಾಶ ದೊರಕಿಲ್ಲದಿರುವ ಬಹುಪಾಲು ಹೊರನಾಡು ಕನ್ನಡಿಗ ಮಕ್ಕಳಿಗೆ ಅನ್ಯಾಯವಾಗುತ್ತದೆ. ಅವರಿರುವ ಕಡೆ ಕನ್ನಡ ಕಲಿಯಲು ಅವಕಾಶವಿಲ್ಲ, ಕರ್ನಾಟಕ ರಾಜ್ಯದಲ್ಲಿ ಆ ಕಾರಣದಿಂದ ಪ್ರವೇಶಾವಕಾಶ ಇಲ್ಲ, ಇಬ್ಬಗೆಯ ಅನ್ಯಾಯಕ್ಕೆ ತುತ್ತಾಗುತ್ತಾರೆ. ಖಾಯಂ ನಿವಾಸದ ಸರ್ಟಿಫಿಕೇಟನ್ನು ಹಾಜರು ಮಾಡುವ ಯಾವುದೇ ಅಭ್ಯರ್ಥಿಗೆ ತಮಿಳುನಾಡಿನಲ್ಲಿ ಪ್ರವೇಶಾವಕಾಶವಿದೆ. ಅದೇ ರೀತಿ ಖಾಯಂ ನಿವಾಸದ ಆಸ್ತಿ ಅಥವಾ ಜನ್ಮಸ್ಥಳದ ಸರ್ಟಿಫಿಕೇಟನ್ನು ಹಾಜರುಪಡಿಸುವ ಕೇರಳದ ಅಭ್ಯರ್ಥಿಗೆ ಕೇರಳದಲ್ಲಿ ಪ್ರವೇಶಾವಕಾಶವಿದೆ. ಹಲವಾರು ತಲೆಮಾರುಗಳ ಹಿಂದೆ ಬೇರೆ ರಾಜ್ಯದಲ್ಲಿ ಹೋಗಿ ನೆಲೆಸಿರಬಹುದಾದ ತೆಲುಗರಿಗೆ ಆಯಾಯ ರಾಜ್ಯದ ಅಥವಾ ಪ್ರದೇಶದ ತೆಲುಗು ಸಮಿತಿಯ ಶಿಫಾರಸ್ಸಿನಲ್ಲಿ ಆಂಧ್ರ ರಾಜ್ಯದಲ್ಲಿ ಪ್ರವೇಶಾವಕಾಶವಿದೆ. ಹೀಗಿರುವಾಗ ಮೇಲೆ ಹೇಳಿದ ಕನ್ನಡಾಧ್ಯಯನದ ನಿಬಂಧನೆಯನ್ನು ಸೇರಿಸಿರುವುದು ಹೊರನಾಡು ಕನ್ನಡಿಗರಿಗೆ ಇಟ್ಟಿರುವ ಮೀಸಲಾತಿಯ ಉದ್ದೇಶವನ್ನೇ ನಿರರ್ಥಕಗೊಳಿಸಿರುವುದರಿಂದ ಸದರಿ ನಿಯಮವನ್ನು ಕೈಬಿಡಬೇಕೆಂದು ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

12-30 p.m.

ಶ್ರೀ ಎಂ, ರಘುಪತಿ.—ಅಧ್ಯಕ್ಷರೇ, ಮಾನ್ಯ ಶ್ರೀನಿವಾಸ್ ಅವರು ಹೇಳಿದ್ದು ನಿಜ ಸಂಗತಿ ಇದೆ. ಆದುದರಿಂದ ಮಾನ್ಯ ಸದಸ್ಯರು ಹೇಳಿದಹಾಗೆ ಮುಂದಿನ ವರ್ಷಕ್ಕೆ ತಿದ್ದುಪಡಿ ಮಾಡಿ ಕೇರಳದ ಮಾದರಿ ಕರ್ನಾಟಕದಲ್ಲಿ ಇದ್ದಹಾಗೆ ಸರ್ಟಿಫಿಕೇಟ್ ತೊಟ್ಟರೆ ಸಾಕು, ಕರ್ನಾಟಕದಲ್ಲಿ ಆಸ್ತಿ ಇದ್ದಹಾಗೆ ಒಂದು ಸರ್ಟಿಫಿಕೇಟ್ ಕೊಟ್ಟರೆ ಆಯ್ತೇ ಸಾಕು ಎಂದು ಮಾಡಬೇಕಾಗುತ್ತದೆ. ಆದರಿಂದ ಹೊರನಾಡು ಕನ್ನಡಿಗರಿಗೂ ಅವಕಾಶವಾಗುತ್ತದೆ. ಆದರೆ ಹೇಳಿದಾಗೆ ಕನ್ನಡ ಶಾಲೆಗಳು ಎಲ್ಲಾ ಪ್ರದೇಶದಲ್ಲೂ ಇಲ್ಲ ಈ ಬಗ್ಗೆ ರೆಪ್ರಸೆಂಟೇಷನ್ಸ್ ಬಂದಿವೆ. ಸರ್ಕಾರ ಈ ಬಗ್ಗೆ ಮುಂದಿನ ವರ್ಷ ಕ್ರಮ ತೆಗೆದುಕೊಳ್ಳುತ್ತದೆ.

(iii) ಕುಂದಾಪುರ ತಾಲ್ಲೂಕಿನ ವಕ್ವಾಡಿಯಲ್ಲಿರುವ ಹರಿಜನರು ಭೂಮಸೂದೆ ಕಾನೂನಿನ್ವಯ ಮೋಸಕ್ಕೆ ಬಲಿಯಾಗಿರುವುದು

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ.—ಅಧ್ಯಕ್ಷರೆ, ನೂರಾರು ವರ್ಷಗಳಿಂದ ಕುಂದಾಪುರ ತಾಲ್ಲೂಕಿನ ವಕ್ವಾಡಿಯಲ್ಲಿ ಜೀವನ ಸಾಗಿಸುತ್ತಿರುವ ಹರಿಜನ ಕುಟುಂಬದ 'ಐತ' ರಾಜಕೀಯ ಮೋಸಕ್ಕೆ ಬಲಿಯಾಗಿ